# ಕೊಡಗಿನ ಆದಿಕವಿ ಹರದಾಸ ಅಪ್ಪಚ್ಚಕವಿಯ 'ಯಯಾತಿ ನಾಟಕದಲ್ಲಿನ ಪರಂಪರೆ ಮತ್ತು ಆಧುನಿಕ ಚಿಂತನೆಯ ಸ್ವರೂಪ'

**ಸೌಮ್ಯ ಕೆ.ಎ.**

ಸಂಶೋಧನ ವಿದ್ಯಾರ್ಥಿನಿ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

DOI: https://doi.org/10.5281/zenodo.15795887

## ABSTRACT:

ಕನ್ನಡ ಸಾಹಿತ್ಯ ಲೋಕದಲ್ಲಿ ಕ್ರಿ.ಶ 1960ರಲ್ಲಿ ಗಿರೀಶ್ ಕಾರ್ನಾಡರು ರಚಿಸಿದ 'ಯಯಾತಿ' ನಾಟಕ ತನ್ನದೇ ಆದ ಛಾಪನ್ನು ಮೂಡಿಸಿದ ವಿಶಿಷ್ಟವಾದ ಕೃತಿ. ಕ್ರಿ.ಶ 1959ರಲ್ಲಿ ಮರಾಠಿ ಲೇಖಕರಾದ ವಿ.ಎಸ್. ಖಾಂಡೇಕರ್‌ರವರು 'ಯಯಾತಿ' ಕೃತಿಯನ್ನು ಮರಾಠಿ ಭಾಷೆಯಲ್ಲಿ ಪ್ರಕಟಿಸಿದರು. ವಿಭಿನ್ನ ಸಂಸ್ಕೃತಿ, ವಿಶೇಷ ಪರಿಸರವನ್ನು ಹೊಂದಿದ ಕೊಡಗು ಭಾಗದಲ್ಲಿ ಆದಿಕವಿ ಎಂದು ಬಿರುದಾಂಕಿತ ಹರದಾಸ ಅಪ್ಪಚ್ಚಕವಿ ಎಲೆ ಮರೆಯ ಕಾಯಿಯಂತೆ ಕ್ರಿ.ಶ 1906ರ ಇಸವಿಯಲ್ಲಿ 'ಯಯಾತಿ' ಎಂಬ ಪೌರಾಣಿಕ ನಾಟಕವನ್ನು ಕೊಡವ ಭಾಷೆಯಲ್ಲಿ ರಚಿಸಿದ್ದರೆಂಬುದು ಗಮನಾರ್ಹ. ಯಯಾತಿ ರಾಜನ ಚರಿತೆಯಾದರೂ, ವೃಷಪರ್ವ ರಾಜನ ಮಗಳಾದ ರಾಜಕುಮಾರಿ ಶರ್ಮಿಷ್ಟೆ ಹಾಗೂ ಶುಕ್ರಾಚಾರಿ ಋಷಿಯ ಪುತ್ರಿಯಾದ ದೇವಯಾನಿಯರ ಸುತ್ತ ಹೆಣೆದ ಕಥೆಯಾಗಿದೆ. ಅಪ್ಪಚ್ಚಕವಿಯ ಈ ನಾಟಕದ ವಿಶೇಷತೆಯೆಂದರೆ ಬ್ರಿಟೀಷರ ಆಳ್ವಿಕೆಯ ಪರಿಣಾಮವಾಗಿ ಪರಂಪರೆಯ ಮೇಲಾದ ಪ್ರಭಾವ ಹಾಗೂ ಆಧುನಿಕ ಸಂಸ್ಕೃತಿಯ ಚಿತ್ರಣ. ನಾಟಕದ ಆರಂಭದ ಸನ್ನಿವೇಶದಲ್ಲಿ ರಾಜಕುಮಾರಿ ಶರ್ಮಿಷ್ಟೆ ದೇವಯಾನಿಗೆ 'ಗುಡ್ ಮಾರ್ನಿಂಗ್' ಎಂದು ಶೇಕ್‌ಹ್ಯಾಂಡ್ ಮಾಡುತ್ತಾಳೆ. ಆಗ ದಾಸಿ "ಹಿಂದೆಲ್ಲಾ ಅದೆಂತಹ ಸಂಪ್ರದಾಯವಿತ್ತು. ಇದೀಗ ಎಲ್ಲವೂ ಬದಲಾಗಿದೆ. ವಿಚಿತ್ರ ಉಡುಗೆ-ತೊಡುಗೆಯಾಗಿ ಬೂಟು, ಸೂಟುಗಳು ಬಂದಿದೆ!" ಎಂದು ಬದಲಾದ ಆಧುನಿಕ ಸ್ಥಿತಿಯನ್ನು ನೆನೆಯುತ್ತಾಳೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ವಿಸ್ಕಿ, ಬ್ರಾಂಡಿಯಂತಹ ಆಧುನಿಕ ಜೀವನ ಶೈಲಿಯ ವಿವರಣೆ ಪೌರಾಣಿಕ ಪಾತ್ರಗಳೊಂದಿಗೆ ನಾಟಕದಲ್ಲಿ ಸಾಗಿ ಬಂದಿದೆ. ಪರಂಪರಾಗತವಾಗಿ ಬಂದ ಸಂಪ್ರದಾಯಗಳಿಗೆ ವಿರುದ್ಧವಾದ ಆಧುನಿಕ ನಡಾವಳಿಯ ಕುರಿತ ವಿಷಾದದ ನೋಟವನ್ನು ಕಾಣಬಹುದು. 1906ರ ಕಾಲಘಟ್ಟದಲ್ಲೇ ಈ ರೀತಿಯ ಚಿಂತನೆ ಕಂಡುಬರುತ್ತದೆ. 'ಯಯಾತಿ' ನಾಟಕದಲ್ಲಿ ಪರಂಪರೆ ಹಾಗೂ ಆಧುನಿಕತೆ ಮುಖಾಮುಖಿಯಾದ ಸಂದರ್ಭ, ಆಧುನಿಕತೆಯ ಕುರಿತ ವಿಭಿನ್ನ ವ್ಯಾಖ್ಯಾನವಿದೆ. ಪರಂಪರೆಯನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿ ಈ ನಾಟಕವು ಪ್ರಸ್ತುತ ಎಂದೆನಿಸುತ್ತದೆ.

ಪೂರ್ಣ ಲೇಖನದಲ್ಲಿ ಹರದಾಸ ಅಪ್ಪಚ್ಚಕವಿ 'ಯಯಾತಿ' ನಾಟಕದಲ್ಲಿ

ಚಿತ್ರಿಸಿದ ಪರಂಪರೆ ಹಾಗೂ ಆಧುನಿಕತೆಯ ಸ್ವರೂಪವನ್ನು ತಿಳಿಸಲಾಗುವುದು.

**KEYWORDS:**

ಯಯಾತಿ, ಹರದಾಸ ಅಪ್ಪಚ್ಚ ಕವಿ, ಆಧುನಿಕತೆ, ಪರಂಪರೆ, ಪಾಶ್ಚಾತ್ಯ ಜೀವನ ಶೈಲಿ, ಆಧುನಿಕ ನಡಾವಳಿ, ಪೌರಾಣಿಕತೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಕ್ರಿ.ಶ 1960ರಲ್ಲಿ ಗಿರೀಶ್ ಕಾರ್ನಾಡರು ರಚಿಸಿದ 'ಯಯಾತಿ' ನಾಟಕ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ ಕೃತಿ. ಕ್ರಿ.ಶ 1959ರಲ್ಲಿ ಮರಾಠಿ ಲೇಖಕರಾದ ವಿ.ಎಸ್. ಖಾಂಡೇಕರ್‌ರವರು 'ಯಯಾತಿ' ಕೃತಿಯನ್ನು ಮರಾಠಿ ಭಾಷೆಯಲ್ಲಿ ಪ್ರಕಟಿಸಿದ್ದರು. ವಿಭಿನ್ನ ಪರಿಸರ, ನೈಸರ್ಗಿಕ ಚೆಲುವಿನ ತಾಣವಾದ ಕೊಡಗು ಪರಿಸರದಲ್ಲಿ ಆದಿಕವಿ ಎಂದು ಬಿರುದಾಂಕಿತ ಹರದಾಸ ಅಪ್ಪಚ್ಚಕವಿ ಎಲೆಮರೆಯ ಕಾಯಿಯಂತೆ ಕ್ರಿ.ಶ 1906ರ ಕಾಲದಲ್ಲಿ 'ಯಯಾತಿ' ಎಂಬ ಪೌರಾಣಿಕ ನಾಟಕವನ್ನು ರಚಿಸಿದ್ದರು ಎಂಬುದು ಗಮನಾರ್ಹ. ಕೊಡವ ಭಾಷೆಯಲ್ಲಿ ರಚಿತವಾದ ಈ ಕೃತಿ ಚಂದ್ರವಂಶದ ರಾಜ ಯಯಾತಿಯ ಕಥೆಯಾಗಿದ್ದು, ವೃಷಪರ್ವ ರಾಜನ ಮಗಳಾದ ರಾಜಕುಮಾರಿ ಶರ್ಮಿಷ್ಠೆ ಹಾಗೂ ಅಸುರರ ಗುರು ಶುಕ್ರಾಚಾರ್ಯರ ಪುತ್ರಿ ದೇವಯಾನಿಯರ ಸುತ್ತ ಹೆಣೆದ ಕಥೆಯಾಗಿದೆ. ಮುಪ್ಪಿನ ಶಾಪಕ್ಕೆ ಗುರಿಯಾಗುವ ಯಯಾತಿ, ರಾಜಕುಮಾರಿಯಾಗಿದ್ದರೂ ಬ್ರಾಹ್ಮಣ ಕನ್ಯೆ ದೇವಯಾನಿಯ ದಾಸಿಯಾಗುವ ಕಥಾನಕವನ್ನು ಯಯಾತಿ ನಾಟಕ ಒಳಗೊಂಡಿದೆ. ಹರದಾಸ ಅಪ್ಪಚ್ಚಕವಿ ರಚಿಸಿದ ಈ ನಾಟಕದ ವಿಶೇಷತೆಯೆಂದರೆ ಅದು ಪರಂಪರೆ ಮತ್ತು ಆಧುನಿಕತೆ ಮುಖಾಮುಖಿಯಾದ ಸಂದರ್ಭದ ಚಿತ್ರಣ. ಪಾಶ್ಚಾತ್ಯ ಆಳ್ವಿಕೆಯ ಪ್ರಭಾವ ದಟ್ಟವಾಗಿ ಸಂಸ್ಕೃತಿ ಅಥವಾ ಪರಂಪರೆಯ ಮೇಲಾದ ನೇರ ಪರಿಣಾಮದ ಹಿನ್ನೆಲೆಯಲ್ಲಿ ಬಹುಮುಖ್ಯವೆನಿಸಿದೆ. ಕಥೆಯ ಹೊಳಹು ಪೌರಾಣಿಕದಾದರೂ ಅಂತರ್ಮುಖಿಯಾಗಿ ಆಧುನಿಕತೆಯ ಸ್ಪರ್ಶವಿದೆ. ಆದರೂ ಆಧುನಿಕತೆ ಕುರಿತಾದ ವಿಷಾದದ ನೋಟವಿದೆ. ಪೌರಾಣಿಕ ಪಾತ್ರಗಳ ಮೂಲಕ ಪಾಶ್ಚಾತ್ಯರ ಆಧುನಿಕ ಜೀವನಶೈಲಿಗೆ ಬದಲಾದ ಪರಂಪರೆಯ ಹತಾಶ ಪ್ರಜ್ಞೆಯನ್ನಿಲ್ಲಿ ಕಾಣಬಹುದು. ಕೊಡಗು ಭಾಗದ ಕಥೆಯೆಂಬಂತೆ ಚಿತ್ರಿಸಿದ್ದು, ಮೊದಲ ಭಾಗದಲ್ಲಿ ರಾಜನಿಗೆ ರೈತನ ದೂರು ಬರುವುದು. ಪೈಸಾರಿ ಜಾಗವನ್ನೆಲ್ಲಾ ಫಾರೆಸ್ಟ್ ಮಾಡಲಾಗಿ ಈಗ ದನಕರು ಮೇಯಲು ಜಾಗವಿಲ್ಲ. ಸರಕಾರಕ್ಕೆ ಕಂದಾಯ ಕಟ್ಟುವುದು ಹೇಗೆ? ಎಂದು ಅಳಲನ್ನು ತೋಡಿಕೊಂಡಾಗ ರಾಜ ನಾಳೆ ಸ್ವತಃ ತಾನೇ ಬೇಟೆಯಾಡಿ ಕಾಡೆಮ್ಮೆ, ಹಂದಿಯ ಬೇಟೆಮಾಡಿ ಕಾಡುಪ್ರಾಣಿಗಳ ಉಪಟಳವನ್ನು ತಡೆವೆನೆಂದು ಕೋವಿಯನ್ನು ಸಿದ್ಧಪಡಿಸಲು ಸೂಚಿಸಿದ. ಬೇಟೆ ಎಂಬ ಪರಂಪರಾಗತ ರಾಜರ ಆಸಕ್ತಿಯ ನಡುವೆ ಬ್ರಿಟೀಷರಿಂದ ಪರಿಚಿತರಾದ ಕೋವಿಯ ಆಧುನಿಕ ಶಸ್ತ್ರ

ಪ್ರಯೋಗವನ್ನಿಲ್ಲಿ ಗಮನಿಸಬಹುದು.

ವೃಷಪರ್ವ ರಾಜನ ಮಗಳು ಶರ್ಮಿಷ್ಠೆ, ಆಕೆಯ ದಾಸಿ ಸಖಿ ದೇವಯಾನಿಯನ್ನು ಕಾಣಲೆಂದು ಋಷಿಯ ಕುಟೀರದ ಬಳಿ ಬಂದರು. ಆಗ ಶರ್ಮಿಷ್ಠೆಯು ದೇವಯಾನಿಗೆ 'ಗುಡ್ ಮಾರ್ನಿಂಗ್' ಎಂದು ಶೇಕ್ ಹ್ಯಾಂಡ್ ಮಾಡುತ್ತಾಳೆ. ಇದನ್ನು ಕಂಡ ಸಖಿಯು ತನ್ನ ಮನದಲ್ಲಿ "ಸೊಕ್ಕಿನ ಹುಡುಗಿಯರು, ಇದೆಂತಹ ಕಾಲ! ಹಿಂದೆಲ್ಲಾ ಹಿರಿಯರ ಕಾಲು ಮುಟ್ಟಿ ನಮಸ್ಕರಿಸುವ ಪರಿಪಾಠವಿತ್ತು. ಈಗ ಕೈಕುಲುಕುವುದು, ಅಪ್ಪಿಕೊಳ್ಳುವುದು, ಬೂಟು, ಸೂಟು, ಶೂ ಇದ್ಯಾವ ಉಡುಗೆ ತೊಡುಗೆಯ ಪರಿ? ಹೌ ಆರ್ ಯೂ, ಗೆಟಿಂಗ್ ಆನ್ ಫ್ರೆಂಡ್, ಡಿಯರ್, ಎಂದು ಶೇಕ್ ಹ್ಯಾಂಡ್ ಮಾಡುವುದೆಲ್ಲಾ ವಿಚಿತ್ರ" ಎಂದು ಅಚ್ಚರಿ ಹಾಗೂ ವಿಷಾದವನ್ನು ವ್ಯಕ್ತಪಡಿಸುತ್ತಾಳೆ.

ದೇವಯಾನಿ ಹಾಗೂ ಶರ್ಮಿಷ್ಠೆ ನೀರಾಟವಾಡಲು ಕೆರೆಯ ಬಳಿ ಬಂದು ತಮ್ಮ ಪ್ರತಿಬಿಂಬವನ್ನು ಕಂಡು ತಮ್ಮ ಸೌಂದರ್ಯವನ್ನು ತಾವೇ ಹೊಗಳಿಕೊಳ್ಳತೊಡಗಿದರು. ತಾನೇ ಸುಂದರಿ, ನೀನು ಸಣ್ಣ ಕಾಲಿನ, ಗೂನು ಬೆನ್ನಿನ, ಸಗಣಿ ಕುಪ್ಪೆ ಮುಖದ, ಸಾಣೆಕಲ್ಲಿನ ಹಲ್ಲಿನವಳು ಎಂದು ದೇವಯಾನಿ ಶರ್ಮಿಷ್ಠೆಯನ್ನು ಹೀಯಾಳಿಸಿದರು. ಆಗ ಶರ್ಮಿಷ್ಠೆ ದೇವಯಾನಿಗೆ ನೀನು ಚಾಟಿಕಾಲಿನ, ಒಣ ಮೂಳೆಯ, ಟೊಳ್ಳು ಮುಖದ, ವಿಚಿತ್ರ ಮೂತಿ ಎಂದು ಮಾತಲ್ಲಿ ತಿವಿದಳು. ಹೀಗೆ ಇವರೀರ್ವರ ಸ್ವಪ್ರಶಂಸೆ, ಪರನಿಂದೆಯ ನಡುವೆ ಅಸೂಯೆ, ಕೇಡು, ಹೊಟ್ಟೆಕಿಚ್ಚಿನ ಪರಾಕಾಷ್ಠೆಯಲ್ಲಿ ಶರ್ಮಿಷ್ಠೆ ಕೋಪದಿಂದ ದೇವಯಾನಿಯನ್ನು ಅಲ್ಲೇ ಇದ್ದ ಬಾವಿಗೆ ದೂಕಿದಳು. ಮತ್ತೆ ತಾನು ಮಾಡಿದ ತಪ್ಪಿಗೆ ಮರುಗಿ ಗುರು ಪುತ್ರಿಯನ್ನು ಕೊಂದ ದೋಷಕ್ಕೆ ಈಡಾಗಬೇಕಲ್ಲ! ಎಂಬ ಪಶ್ಚಾತ್ತಾಪದಿಂದ ನೊಂದಳು.

ಇತ್ತ ಬೇಟೆಗೆಂದು ರಾಜ ಕಾಡಿಗೆ ತನ್ನ ಮಂತ್ರಿಯ ಜೊತೆಗೂಡಿ ಬಂದಾಗ, ಮಂತ್ರಿಯ ಪತ್ನಿಯ ಪ್ರಸ್ತಾಪದ ನಡುವೆ ರಾಜ, ಪತ್ನಿಯಾದವಳು ಪತಿ ಹೇಳಿದ ಹಾಗೆ ನಡೆಯಬೇಕು. ಗಂಡನ ಆಜ್ಞೆ ಪಾಲಿಸದ ಮಡದಿ ದರಿದ್ರಳು... ಆದ್ದರಿಂದ ವಿವಾಹದ ಸಂದರ್ಭ ಸತಿಯ ಮೂರು ತಲೆಮಾರಿನ ತನಕ ವಿಚಾರಿಸಿ ನಂತರ ಆ ಹೆಣ್ಣನ್ನು ವಿವಾಹವಾಗುವುದು ಒಳಿತು. ಇಲ್ಲವಾದಲ್ಲಿ ಕಷ್ಟ ಎಂದು ರಾಜ ತನ್ನ ಅಭಿಪ್ರಾಯ ವ್ಯಕ್ತಪಡಿಸುವಾಗ ಪರಂಪರಾಗತ ಪತಿವ್ರತೆಯ ಹೆಣ್ಣಿನ ಕುರಿತ ನಂಬಿಕೆ ಗ್ರಹಿಸಬಹುದು.

ಬಾವಿಯೊಳಗಿದ್ದ ದೇವಯಾನಿಯ ಕೂಗು ಕೇಳಿ ರಾಜ ಯಯಾತಿ ತನ್ನ ಬಲಗೈ ನೀಡಿ ಆಕೆಯನ್ನು ಮೇಲಕೆತ್ತಿ ತಂದಾಗ ಆಕೆಯ ಸೌಂದರ್ಯ ಕಂಡು ಮರುಳಾದ. ಆಕೆಯು ಆತನಲ್ಲಿ ಅನುರಕ್ತಳಾದಳು. ಸುಂದರಿಯಾದ ಈಕೆ ತನ್ನ

ಕ್ಷತ್ರಿಯ ಧರ್ಮಕ್ಕೆ ಸರಿಯಾದ ರಾಣಿ ಎಂದು ಆಕೆಯಲ್ಲಿ ಪೂರ್ವ ಪರ ವಿಚಾರಿಸಿದಾಗ ಆಕೆ ತಾನು ಬ್ರಾಹ್ಮಣ ಕನ್ಯೆ, ಶುಕ್ರಾಚಾರ್ಯರ ಪುತ್ರಿ ಎಂದಾಗ ಋಷಿ ಪುತ್ರಿಯ ಸಾಹಸ ತನಗೆ ತಕ್ಕದ್ದಲ್ಲ, ನಹುಷನ ಮಗನಾದ ತಾನು ಈಕೆಯನ್ನು ವಿವಾಹವಾದಲ್ಲಿ ತನ್ನ ಕ್ಷತ್ರಿಯ ಕುಲಕ್ಕೆ ಅವಮಾನವೆಂದು ಬಗೆದು ಆಕೆಯನ್ನು ತಿರಸ್ಕರಿಸಿದನು. ಆದರೆ ದೇವಯಾನಿ ತಾನು ತನ್ನ ಎಡಗೈ ನೀಡದೆ ತಾವು ಬಲಗೈ ನೀಡಿ ತನ್ನನ್ನು ಕೈ ಹಿಡಿದಿದ್ದರಿಂದ ಆಗಿ ತೆರಳುವುದು ಉಚಿತವಲ್ಲ ಎಂದಳು. ಯಯಾತಿ ಹೊರಟೆ ಬಿಟ್ಟ. ಇತ್ತ ದೇವಯಾನಿ ಶರ್ಮಿಷ್ಟೆ ಹಾಗೂ ಯಯಾತಿಯಿಂದಾದ ಅವಮಾನದಿಂದಾಗಿ ತಕ್ಕ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ತಂದೆ ಶುಕ್ರಾಚಾರ್ಯರ ಬಳಿ ಬಂದು ಇದ್ದ ವಿಷಯಕ್ಕೆ ಮತ್ತೆರಡು ಸೇರಿಸಿ ದೂರಿದಳು. ಶುಕ್ರಾಚಾರ್ಯರು ಕುಪಿತರಾಗಿ ಮೊದಲು, ರಾಜನ ಬಳಿಗೆ ಬಂದು ಶರ್ಮಿಷ್ಟೆಯನ್ನು ಶಿಕ್ಷೆಗೆ ಗುರಿಪಡಿಸಬೇಕಾಗಿ ಆಜ್ಞಾಪಿಸಿದರು. ಗುರುಗಳ ಮಾತಿಗೆ ತಪ್ಪಿದಲ್ಲಿ ತಾನು ತೊಂದರೆ ಅನುಭವಿಸಬೇಕಾದ್ದರಿಂದ ಮಗಳನ್ನು ಕೊಲ್ಲಿಸಲು ಆಜ್ಞಾಪಿಸಿದ. ಆದರೆ ಶುಕ್ರಾಚಾರ್ಯರು ಆಕೆ ದೇವಯಾನಿಯ ಬಳಿ ಕ್ಷಮೆ ಯಾಚಿಸಲು ಸೂಚಿಸಿದರು.

ಶರ್ಮಿಷ್ಟೆ ದೇವಯಾನಿಯ ಕಾಲು ಹಿಡಿದು ಕ್ಷಮೆ ಕೇಳಿದಾಗ ದೇವಯಾನಿಯು ಆಕೆಗೆ ತನ್ನ ದಾಸಿಯಾಗಿ ಸೇವೆ ಮಾಡಲು ಸೂಚಿಸಿದಳು. ರಾಜಕುಮಾರಿಯಾದ ತಾನು ಈಕೆಯ ಸೇವೆ ಮಾಡುವುದೇ, ದಾಸಿಯಾಗಿ ಹೇಗಿರಲಿ ಎಂದು ಶರ್ಮಿಷ್ಟೆ ದುಃಖಿತಳಾದಳು.

ರಾಜ ವೃಷಪರ್ವ ಮಗಳಿಗಾದ ಈ ಗತಿ ನೆನೆದು ಇದಕ್ಕೆ ಒಪ್ಪದಿದ್ದಲ್ಲಿ ಮೃತ ಸಂಜೀವಿನಿ ದೇವತೆಯರ ವಶವಾಗುವುದು ಎಂದು ರಾಣಿಯು ತನ್ನ ಪುತ್ರಿ ವಿವಾಹವಾಗಿ ಅಂಬಾರಿಯಲ್ಲಿ ತಿರುಗುವ ಯೋಗವೂ ತಪ್ಪಿತೆಂದು ರೋಧಿಸಿದರು.

ದೇವಯಾನಿ ದಾಸಿಯಾದ ಶರ್ಮಿಷ್ಟೆಯನ್ನು ತನಗೆ ಬೇಕಾದಂತೆ ಬಳಸಿ ಹೀಯಾಳಿಸುತ್ತಾ ಕಾಡಿಗೆ ವನವಿಹಾರಕ್ಕೆ ಎಂದು ಬಂದಾಗ ಮತ್ತೆ ಯಯಾತಿ ರಾಜ ಈ ಬಾರಿ ಶರ್ಮಿಷ್ಟೆಯನ್ನು ಕಂಡು ಮರುಳಾದ. ಆದರೆ ದೇವಯಾನಿ ತಾನು ಬಯಸಿದ ರಾಜ ಈಕೆಯನ್ನು ವಿವಾಹವಾಗಲು ಪ್ರಯತ್ನಿಸುವುದನ್ನು ಕಂಡು ಮತ್ತೆ ತನ್ನ ತಂದೆಯ ಬಳಿ ಬಂದು ದೂರಿದಳು. ಶುಕ್ರಾಚಾರ್ಯರು ಯಯಾತಿ ರಾಜನಿಗೆ ಮೇಲ್ಜಾತಿ ಹೆಣ್ಣು ವಿವಾಹವಾಗಲು ಆಸೆಪಟ್ಟರೆ ತಪ್ಪಲ್ಲ ಎಂದಾಗ ಅಲ್ಲಿದ್ದ ಮಂತ್ರಿ ತನ್ನ ಮನದಲ್ಲಿ ಹೆಣ್ಣು ಆಸೆಪಟ್ಟು ಆಕೆ ವಿವಾಹವಾದರೆ ತಪ್ಪಲ್ಲ ಆದರೆ ಅದೇ ಗಂಡು ಆಸೆಪಟ್ಟು ಹೆಣ್ಣಿನ ಕೈ ಹಿಡಿದರೆ ಅದು 'ರೇಪ್ ಕೇಸ್' ಇದ್ಯಾವುದೂ ಈ ಋಷಿಯ ಕಥೆ ಎಂದು ಯೋಚಿಸಿದ.

ಗುರು ಶಾಪಕ್ಕೆ ಗುರಿಯಾಗಲು ಇಚ್ಛಿಸದ ಯಯಾತಿ ದೇವಯಾನಿಯನ್ನು

ಗಂಧರ್ವ ವಿವಾಹವಾದನು. ಶರ್ಮಿಷ್ಠೆ ಯಯಾತಿಯ ಬರುವಿಕೆಗೆ ಕಾದಳು. ಆಕೆಯ ಸಖಿ ಈಕೆಯ ವಿರಹದ ತಾಪವನ್ನು ಕಂಡು ಈಗಿನ ಕಾಲದಲ್ಲಿ ಯುವಕರ ಆಟಗಳು ವಿಚಿತ್ರ, ಹಿಂದಿನ ನಂಬಿಕೆ ಆಚರಣೆಗಳು ಯಾವುದೂ ಬೇಡ, ಮೀಸೆ ಬೋಳಿಸಿ ಅರೆ ಮೀಸೆ ಇಟ್ಟುಕೊಳ್ಳುವರು. ಹಿಂದೆ ತಂದೆ ತಾಯಿ ಸಮೀಪ ವರ್ತಿಗಳು ಮರಣಿಸಿದರೆ ಮೀಸೆ ಬೋಳಿಸುತ್ತಿದ್ದರು, ಈಗ ಖುಷಿ ಬಂದಂತೆ ಆಟ. ಹೆಣ್ಣು ಮಕ್ಕಳ ತಲೆ ಬಾಚುವ ವಿಧಾನವಂತು ಅತಿ ವಿಚಿತ್ರ ಎಂದು ಸಖಿಯು ಆಗಿನ ಕಾಲದಲ್ಲಾದ ವೇಷಭೂಷಣಗಳ ಬದಲಾದ ಪರಿಯ ಕುರಿತು ಚಿಂತೆಯನ್ನು ಕಾಣಬಹುದು.

ದೇವಯಾನಿಗೆ ಎರಡು ಪುತ್ರರ ಜನನವಾಯಿತು. ಇತ್ತ ಶರ್ಮಿಷ್ಠೆ ಇನ್ನು ಕೊರಗಿದಳು. ಯಯಾತಿ ರಾಜನ ಬಳಿ ವಿವಾಹವಾಗದಿದ್ದಲ್ಲಿ ತಾನು ಮರಣಿಸುವೆನೆಂದಾಗ ಸ್ತ್ರೀಹತ್ಯಾ ದೋಷಕ್ಕೆ ಬೆದರಿ ಯಯಾತಿ ಶರ್ಮಿಷ್ಠೆಯನ್ನು ವಿವಾಹವಾದ. ಮೂರು ಮಂದಿ ಪುತ್ರರನ್ನು ಪಡೆದಳು. ಮತ್ತೆ ದೇವಯಾನಿ ಹಾಗೂ ಶರ್ಮಿಷ್ಠೆಯರ ನಡುವಿನ ಅಸೂಯೆ, ದ್ವೇಷ ಮತ್ತೆ ಮುಂದುವರಿಯಿತು. ರಾಜ ಉಭಯ ಸಂಕಟಕ್ಕೆ ಈಡಾದ, "ಮೊಸಳೆ ಹೆಡೆ ಎತ್ತಿದ ಹಾವನ್ನಾದರೂ ನಂಬಬಹುದು ಆದರೆ ಈ ಸ್ತ್ರೀಯರನ್ನು ನಂಬುವುದು ಬಹು ಕಷ್ಟ ಎಂದು ರಾಜ ಚಿಂತಿಸಿದ. ಸರ್ವ ಕಷ್ಟಕ್ಕೂ ಹೆಣ್ಣೇ ಕಾರಣ" ಎಂದು ರೂಢಿಗತವಾಗಿ ಪರಂಪರೆಯಿಂದ ಬಂದ ಕಾರಣವನ್ನು ಇಲ್ಲಿ ರಾಜನು ಯೋಚಿಸುತ್ತಾನೆ.

ದೇವಯಾನಿಯ ತಂದೆಯಾದ ಶುಕ್ರಾಚಾರ್ಯರಿಗೆ ಯಯಾತಿ ಶರ್ಮಿಷ್ಠೆಯನ್ನು ವಿವಾಹವಾದುದಲ್ಲದೆ ಪುತ್ರರನ್ನು ಪಡೆದ ವಿಚಾರ ತಿಳಿದು ಮುಪ್ಪಿನ ಶಾಪವನ್ನು ನೀಡೇ ಬಿಟ್ಟನು.

ವೃದ್ಧನಾದ ಯಯಾತಿ ಶಾಪವನ್ನು ಪರಿಹರಿಸಲು ಬೇಡಿದಾಗ ನಿನ್ನ ಪುತ್ರರಲ್ಲಿ ನಿನ್ನ ಶಾಪವನ್ನು ಹಂಚಿಕೊಳ್ಳುವುದಾದರೆ ಶಾಪ ಪರಿಹಾರವಾಗುತ್ತದೆ ಎಂದಾಗ ಶರ್ಮಿಷ್ಠೆಯ ಮಗ ಪುರು ಮಾತ್ರ ತನ್ನ ತಂದೆ ಶಾಪವನ್ನು ಪಡೆದನು. ಸಾವಿರ ಕಾಲ ಸುಖವಾಗಿ ಬಾಳು ಎಂದು ಹೇಳಿ ವೃದ್ಧಾಪ್ಯವನ್ನು ಪಡೆದುಕೊಂಡ ತನ್ನ ತಾರುಣ್ಯವನ್ನು ತಂದೆಗೆ ದಾರೆಎರೆದ ಪುರು ಆದರ್ಶ ಪುತ್ರನೇ ಸರಿ.

ನಾಟಕದ ಅಂತ್ಯದಲ್ಲಿ ಪ್ರಜೆಗಳ ಬದುಕಿನ ನೋಟವಿದ್ದು, ಕಾಫಿ ಹಣ ಬಂದಾಗ ಬ್ರಾಂಡಿ, ವಿಸ್ಕಿ, ಬಿಯರ್ ಕುಡಿಯುವುದು, ಇಲ್ಲವಾದಲ್ಲಿ ಸೇಂದಿಯ ಗತಿ ಎಂದು ಆಧುನಿಕ ಜೀವನ ಶೈಲಿಯ ನಿರೂಪಣೆಯಿದೆ. ಕಂದಾಯ ಕಚೇರಿಯಲ್ಲಿನ ಸೆಸ್, ಸರ್ವೆ ನಂಬರ್, ಲಂಚ ಇದೆಲ್ಲದರಿಂದ ಪ್ರಜೆಗಳು ಸೋತು ಹೋದ ವಿವರಣೆ ಇದೆ. ಸಂತೋಷಕೂಟಕ್ಕೆ ಪಲಾವ್, ರೋಸ್ಟ್, ಚಾಪ್ಸ್, ಮುಳ್ಳು ಚಮಚ ಇವುಗಳ ಆಧುನಿಕ ಆಹಾರ ವಿಧಾನದ ಉಲ್ಲೇಖ ಈ ನಾಟಕದಲ್ಲಿದೆ. ಒಟ್ಟಾರೆಯಾಗಿ ಪುರಾಣದ

ಪಾತ್ರಗಳ ಮುಖೇನ ಆಧುನಿಕ ಸಂದರ್ಭದಲ್ಲಿ ನೋಟವನ್ನು ಗ್ರಹಿಸಬಹುದು. 1906ರ ಕಾಲಘಟ್ಟದಲ್ಲಿನ ನಾಟಕದ ಆಶಯವು ಪ್ರಸ್ತುತ ದಿನಮಾನಕ್ಕೆ ಹೊಂದುವಂತಿದೆ. ಪರಂಪರಾಗತವಾಗಿ ಬಂದ ಸಂಪ್ರದಾಯಗಳಿಗೆ ವಿರುದ್ಧವಾದ ಆಧುನಿಕ ನಡಾವಳಿಯ ಕುರಿತ ವಿಷಾದದ ನೋಟವಿದೆ. ಯಯಾತಿ ನಾಟಕದಲ್ಲಿ ಪರಂಪರೆ ಹಾಗೂ ಆಧುನಿಕತೆ ಮುಖಾಮುಖಿಯಾದ ಸಂದರ್ಭ ಆಧುನಿಕತೆಯ ಕುರಿತು ವಿಭಿನ್ನ ವ್ಯಾಖ್ಯಾನವಿದೆ. ಪರಂಪರೆಯನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆಯಲ್ಲಿ ಈ ನಾಟಕ ಪ್ರಸ್ತುತ ಎಂದೆನಿಸುತ್ತದೆ.

## ಪರಾಮರ್ಶನ ಗ್ರಂಥಗಳು:

1. ಹರದಾಸ ಅಪ್ಪಚ್ಚ, (2010), ಕವೀರ ನಾಲ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.
2. ಐತಿಚಂಡ ರಮೇಶ್ ಉತ್ತಪ್ಪ, (2017), ಕೊಡಗಿನ ಕಾಳಿದಾಸ: ಹರದಾಸ ಅಪ್ಪ ನೆರದಂಡ ಅಪ್ಪಚ್ಚಕವಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.
3. ರೇಖಾ ವಸಂತ್, (2006), ಕೊಡವ ರಂಗಭೂಮಿ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.